ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :—

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಹುಕ್ಕೇರಿ ತಾಲ್ಲೂಕಿನ ಮಾರ್ಕಂಡೇಯ ನದಿಯ ಅಣೆಕಟ್ಟಿನ ನಿರ್ಮಾಣದಿಂದ ನಿರ್ವಸತಿಯಾದವರಿಗೆ ಪುನರ್‌ವಸತಿ

2669(2773) ಶ್ರೀ ಉಮೇಶ್ ವಿಶ್ವನಾಥ ಕತ್ತಿ (ಹುಕ್ಕೇರಿ) :— ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೆಳಗಾವಿ ಜಿಲ್ಲೆ ಹುಕ್ಕೇರಿ ತಾಲ್ಲೂಕಿನ ಮಾರ್ಕಂಡೇಯ ನದಿಗೆ ಅಡ್ಡಲಾಗಿ ಅಣೆಕಟ್ಟು ನಿರ್ಮಾಣದಿಂದ ಆ ಅಣೆಕಟ್ಟು ಹಿಂಭಾಗದಲ್ಲಿ ವಾಸಿಸುತ್ತಿದ್ದ 2000 ಎಸ್.ಟಿ. ಜನಾಂಗದವರು ಹಿನ್ನೀರಿನಿಂದ ಮುಳುಗಡೆಯಾದ ಮಸತಿ ಹಾಗೂ ಜಮೀನನ್ನು ಕಳೆದುಕೊಂಡು ನಿರ್ವಸತಿಕರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ನಿರ್ವಸತಿಕರ ಪುನರ್ವಸತಿಗಾಗಿ ಸರ್ಕಾರವು ಹಾಕಿಕೊಂಡಿರುವ ಕಾಲಬದ್ಧ ಯೋಜನೆಯೇನು?

ಇ) ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಸರ್ಕಾರವು ಕೈಗೊಂಡಿರುವ ಕ್ರಮವೇನು?

ಶ್ರೀ ಎಚ್.ಕೆ ಪಾಟೀಲ್ (ಜಲಸಂಪನ್ಮೂಲ ಸಚಿವರು) :—

ಅ) ಬಂದಿದೆ.

ಈ ಯೋಜನೆಯಡಿಯಲ್ಲಿ ಮುಳುಗಡೆಯಾಗಬಹುದಾದ ಗ್ರಾಮ ಹಾಗೂ ಈ ಹಳ್ಳಿಗಳಲ್ಲಿ ವಾಸಿಸುವ ಜನರ ಸಂಖ್ಯೆ ಹಾಗೂ ಎಸ್.ಟಿ. ಜನಾಂಗ ಸಹಿತ ಇತ್ಯಾದಿ ವಿವರಗಳನ್ನು ಸಂಗ್ರಹಿಸಲಾಗುತ್ತಿದೆ.

ಆ) ಈ ನಿರ್ವಸತಿಕರ ಪುನರ್ವಸತಿಗಾಗಿ ಹಾಗೂ ಅವರು ಕಳೆದುಕೊಳ್ಳುವ ಆಸ್ತಿಗಳಿಗೆ ಪರಿಹಾರ, ಪುನರ್ವಸತಿ ನಿವೇಶನ ಹಾಗೂ ಬದಲೀ ಕೃಷಿ ಜಮೀನು ಹಾಗೂ ಮೂಲಭೂತ ಸೌಲಭ್ಯ ಕಲ್ಪಿಸುವ ಸಲುವಾಗಿ ಅಣೆಕಟ್ಟು ನಿರ್ಮಾಣ ಹಂತದೊಂದಿಗೆ ಸಂಯೋಜಿಸಿ ಜುಲೈ 2002 ರವರೆಗೆ ಕಾಲಬದ್ಧ ಯೋಜನೆ ಹಾಕಿಕೊಳ್ಳಲಾಗಿದೆ.

ಇ) ಪುನರ್ವಸತಿ ಕೇಂದ್ರ ನಿರ್ಮಿಸುವ ಸಲುವಾಗಿ ಸಂತಿ ಬಸ್ತವಾಡ ಹಾಗೂ ವಾಘವಡೇ ಗ್ರಾಮ ಹದ್ದಿನಲ್ಲಿ 40 ಎಕರೆ ಸರ್ಕಾರಿ ಜಮೀನಿನಲ್ಲಿ ಪುನರ್ನಿವೇಶನ

ಕೇಂದ್ರ ನಿರ್ಮಿಸಲು ಲೇಔಟ್ ಪ್ಲಾನ್ ತಯಾರಿಸಲಾಗಿದೆ ಮತ್ತು ನಿರಾಶ್ರಿತರಿಗೆ ಬದಲೀ ಕೃಷಿ ಜಮೀನು ಒದಗಿಸುವ ಸಲುವಾಗಿ ಬೆಳಗಾವಿ ತಾಲ್ಲೂಕು ಮಾಳೆವಾಡಿ ಹಾಗೂ ಖಾನಾಪುರ ತಾಲ್ಲೂಕ್ ಕಟಬಾಳಿ ಗ್ರಾಮ ಸರಹದ್ದಿನಲ್ಲಿ 719 ಎಕರೆ ಅರಣ್ಯ ಜಮೀನು ಪಡೆಯಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಅದರಂತೆ ಜನರು ಕಳೆದುಕೊಳ್ಳುವ ಆಸ್ತಿ ಪಾಸ್ತಿಗಳಿಗೆ ಸೂಕ್ತ ಪರಿಹಾರ ನಿವೇಶನ ಹಾಗೂ ಮೂಲಭೂತ ಸೌಲಭ್ಯ ಒದಗಿಸುವ ಸಂಬಂಧದಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆ ಅಧರಿ. ರಿಹ್ಯಾಬಿಲಿಟೇಷನ್ ಪ್ಯಾಕೇಜ್ ತಯಾರಿಸಿ ವಿಶೇಷಾಧಿಕಾರಿಗಳಿಂದ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ.

ಬೆಳಗಾವಿ ಜಿಲ್ಲೆ ಹುಕ್ಕೇರಿ ಮತಕ್ಷೇತ್ರದ ಕಬ್ಬೂರ ಏತ ನೀರಾವರಿ ಯೋಜನೆ

2470 (2774) ಶ್ರೀ ಉಮೇಶ್ ವಿಶ್ವನಾಥ ಕತ್ತಿ (ಹುಕ್ಕೇರಿ) :— ಮಾನ್ಯ ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾ:ಕಿನ ಹುಕ್ಕೇರಿ ಮತಕ್ಷೇತ್ರದ ಕಬ್ಬೂರ ಏತ ನೀರಾವರಿ ಯೋಜನೆಯು ಸರ್ಕಾರದ ಯಾವ ಹಂತದಲ್ಲಿದೆ. ಈ ಯೋಜನೆಯ ಒಟ್ಟು ವೆಚ್ಚ ಎಷ್ಟು?

ಆ) ಈ ಏತ ನೀರಾವರಿ ಕಾಮಗಾರಿಯನ್ನು ಪ್ರಾರಂಭಿಸಲು ಸರ್ಕಾರಕ್ಕೆ ಇರುವ ತೊಂದರೆ ಏನು?

ಇ) ಈ ಭಾಗದ ರೈತರ ಹಿತದೃಷ್ಟಿಯಿಂದ ಸದರಿ ಯೋಜನೆಯನ್ನು ಯಾವಾಗ ಪ್ರಾರಂಭಿಸಲಾಗುವುದು ಹಾಗೂ ಅದನ್ನು ಪೂರ್ಣಗೊಳಿಸಲು ತೆಗೆದುಕೊಳ್ಳುವ ಕಾಲಾವಕಾಶವೆಷ್ಟು?

ಶ್ರೀ ಎಚ್.ಕೆ ಪಾಟೀಲ್ (ಜಲಸಂಪನ್ಮೂಲ ಸಚಿವರು) :—

ಅ) ಕಬ್ಬೂರ ಏತ ನೀರಾವರಿ ಯೋಜನೆಯ ಪ್ರಸ್ತಾವನೆಯನ್ನು ಕರ್ನಾಟಕ ನೀರಾವರಿ ನಿಗಮದಿಂದ ತಾಂತ್ರಿಕವಾಗಿ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಸರ್ಕಾರವು ವ್ಯವಸ್ಥಾಪಕ ನಿರ್ದೇಶಕರಿಗೆ ದಿನಾಂಕ :16-1-99 ರಂದು ಸೂಚಿಸಲಾಗಿದೆ. ನಿಗಮದ ತಾಂತ್ರಿಕ ಉಪಸಮಿತಿಯು ಹಲವು ಸ್ಪಷ್ಟೀಕರಣ ಕೋರಿದ್ದು, ವಿವರವಾದ ಅಂದಾಜನ್ನು ತಯಾರಿಸಲು ಸೂಚಿಸಿದೆ. ಈ ಯೋಜನೆಯ ವೆಚ್ಚವು ಸುಮಾರು ರೂ. 288 ಲಕ್ಷಗಳು ಎಂದು ಅಂದಾಜಿಸಲಾಗಿದೆ.

ಆ) ಸದರಿ ಕೆಲಸದ ಸರ್ವೆ ಕಾರ್ಯವು ಹಾಗೂ ಯೋಜನಾವರದಿಯ ತಯಾರಿಕೆಯ ಕೆಲಸ ಈಗ ಪ್ರಗತಿಯಲ್ಲಿದೆ.